ಸಣ್ಣ ಮತ್ತು ಅತಿ ಸಣ್ಣ ರೈತರ ಬಗ್ಗೆ.

೨೧೩. **ಶ್ರೀ ಹೆಚ್. ಜಿ. ಗೋವಿಂದ ಗೌಡ (ಶೃಂಗೇರಿ).**— ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರೆಂದು ಯಾವ ಆಧಾರದ ಮೇಲೆ ವರ್ಗೀಕರಣ ಮಾಡಲಾಗಿದೆ,

ಆ) ಕೇಂದ್ರ ಸರ್ಕಾರ ರಿಸರ್ವ್ ಬ್ಯಾಂಕ್ ಮತ್ತು ರಾಜ್ಯ ಸರ್ಕಾರಗಳ ವ್ಯಾಖ್ಯಾನಗಳ ಬಗ್ಗೆ ತಾರತಮ್ಯವಿದೆಯೇ,

ಇ) ಆ ರೀತಿ ಇದ್ದರೆ ಇದಕ್ಕೆ ಕಾರಣಗಳೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ ಮಂತ್ರಿಗಳು).—

ಅ) ರಾಜ್ಯದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಈ ಕೆಳಕಂಡ ಕೇಂದ್ರ ಸರ್ಕಾರದ ಮಾರ್ಗಸೂಚಿಯ ಆಧಾರದ ಮೇಲೆ ವರ್ಗೀಕರಣ ಮಾಡಲಾಗಿದೆ.

ಸಣ್ಣ ರೈತರು.—೫ ಎಕರೆಗಳಿಗಿಂತ ಕಡಿಮೆ ಇರುವ ಬೇಸಾಯಗಾರರು. ಪ್ರಥಮ ದರ್ಜೆ ನೀರಾವರಿ ಜಮೀನು ಇದ್ದರೆ ಮಿತಿಯು ೨.೫ ಎಕರೆಗಳು.

ಅತಿ ಸಣ್ಣ ರೈತರು.— ಎರಡೂವರೆ ಎಕರೆಗಳಿಗಿಂತ ಕಡಿಮೆ ಖುಷ್ಕಿ ಭೂಮಿ ಇರುವ ಬೇಸಾಯಗಾರರು. ಪ್ರಥಮ ದರ್ಜೆ ನೀರಾವರಿ ಜಮೀನು ಇದ್ದರೆ ಮಿತಿಯು ಒಂದೂಕಾಲು ಎಕರೆ ಇದೆ.

ಆ) ಇದೆ.

ಇ) ಸಾಲಗಳ ಮೇಲೆ ಬಡ್ಡಿದರಗಳನ್ನು ನಿರ್ಧರಿಸಲು ರಿಸರ್ವ್ ಬ್ಯಾಂಕಿನವರು ತಮ್ಮದೇ ಆದ ಮಾರ್ಗಸೂಚಿಯನ್ನು ಅನುಸರಿಸುತ್ತಾರೆ. ರಾಜ್ಯ ಸರ್ಕಾರಗಳು, ಕೇಂದ್ರ ಪುರಸ್ಕೃತ ಯೋಜನೆಗಳಿಂದ ನೆರವು ಪಡೆಯಬೇಕಾದರೆ ಕೇಂದ್ರ ಸರ್ಕಾರವು ಗೊತ್ತು ಪಡಿಸಿರುವ ಮಾರ್ಗ ಸೂಚಿಯನ್ನು ಅನುಸರಿಸಬೇಕಾಗುತ್ತದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಇದು ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಾರ ಇದೆ. ಅವರ ಡೆಫಿನೀಷನ್ ಪ್ರಕಾರ ಕೊಟ್ಟಿದ್ದೇವೆ. ರಿಸರ್ವ್ ಬ್ಯಾಂಕಿನವರು ಕೂಡ ಒಂದು ಸ್ಲಾಬ್ ಇಟ್ಟು ಕೊಂಡಿದ್ದಾರೆ. ನಮ್ಮ ಸರ್ಕಾರದವರು ಅದನ್ನು ಅನುಸರಿಸುವುದಕ್ಕೆ ಆಗುವುದಿಲ್ಲ. ನಾವು ಕೇಂದ್ರದ ನೆರವು ಪಡೆಯಬೇಕಾಗಿರುವುದರಿಂದ ಕೇಂದ್ರದ ಮಾರ್ಗಸೂಚಿಯನ್ನೇ ಅನುಸರಿಸಬೇಕಾಗುತ್ತದೆ.

ಶ್ರೀ ಹೆಚ್. ಜಿ ಗೋವಿಂದ ಗೌಡ.—ಕೇಂದ್ರ ಸರ್ಕಾರದಲ್ಲಿ, ರಿಸರ್ವ್ ಬ್ಯಾಂಕಿನಲ್ಲಿ ಹಾಗೂ ರಾಜ್ಯ ಸರ್ಕಾರದಲ್ಲಿ ತಾರತಮ್ಯ ಇದೆ. ಇದರಿಂದ ರೈತರಿಗೆ ಏನೂ ಕೂಡ ಗೊತ್ತಾಗುವುದಿಲ್ಲ. ಇದರ ಬಗ್ಗೆ ಸ್ಪಷ್ಟ ವಿವರಣೆಯನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಸ್ವಾಮಿ, ರಿಸರ್ವ್ ಬ್ಯಾಂಕಿನವರು ಏನು ಮಾಡಿದ್ದಾರೆಂದರೆ, ತೀರ ಪ್ರದೇಶಗಳು, ಮಲೆನಾಡು ಪ್ರದೇಶಗಳು, ಬಯಲುಸೀಮೆ ಎಂದು ವರ್ಗೀಕರಣ ಮಾಡಿದ್ದಾರೆ. ಮಾನ್ಯ ಸದಸ್ಯರ ಆತಂಕವನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಅಡಿಯಲ್ಲಿ ೩೫೦೦ ರೂಪಾಯಿಗಳ ಒಳಗಡೆ ಬರತಕ್ಕ ಎಲ್ಲರೂ ಈ ಯೋಜನೆಯೊಳಗೆ ಬರಬೇಕೆಂದು ಆದೇಶ ಕೊಟ್ಟಿದ್ದೇನೆ.

ಶ್ರೀ ಹೆಚ್. ಜಿ. ಗೋವಿಂದ ಗೌಡ.—ಬಹುಶಃ ಇದರ ಹಿನ್ನಲೆಯಲ್ಲಿ ಸಣ್ಣ ಮತ್ತು ಮಧ್ಯಮ ಹಾಗೂ ದೊಡ್ಡ ರೈತರು ಎಂದು ವಿಂಗಡಣೆ ಮಾಡಿ ಒಡೆದಂ ಆಳುವ ನೀತಿಯಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಇದು ಒಡೆದು ಆಳುವ ನೀತಿಯಲ್ಲ, ಸರ್ಕಾರ ಕೆಲವು ದುರ್ಬಲ ವರ್ಗಗಳಿಗೆ ಅನುಕೂಲ ಮಾಡಬೇಕೆಂಬ ದೃಷ್ಟಿಯಿಂದ ವರ್ಗೀಕರಣ ಮಾಡಲಾಗಿದೆ.

ಶ್ರೀ ಸಿ. ಬೈರೇಗೌಡ.—ಸ್ವಾಮಿ, ರಾಜ್ಯದಲ್ಲಿ ೫ ಎಕರೆ ಜಮೀನು ಹೊಂದಿರತಕ್ಕ ಕುಟುಂಬಗಳು ಎಷ್ಟು ? ಎರಡೂವರೆ ಎಕರೆ ಜಮೀನು ಹೊಂದಿರತಕ್ಕ ಕುಟುಂಬಗಳು ಎಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್.—ಇದಕ್ಕೆ ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದ ಗೌಡ —ಹಾಲಿ ಇರತಕ್ಕ ಒಂದು ಪದ್ಧತಿಯಿಂದ ಭೂ ಅಭಿವೃದ್ಧಿ ಬ್ಯಾಂಕ್ ಮೂಲಕ ಸಾಲ ಪಡೆಯತಕ್ಕ ರೈತರಿಗೆ ಬಹಳ ಅನ್ಯಾಯವಾಗುತ್ತದೆ. ಎರಡೂವರೆ ಎಕರೆ ನಿಗದಿ ಮಾಡುವ ಬದಲು ಹಣದ ರೂಪದಲ್ಲಿ ಸಹಾಯ ಮಾಡಿದರೆ ಅನುಕೂಲವಾಗುತ್ತದೆ, ಇದರ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡುತ್ತಾರೆಯೆ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಕೇಂದ್ರ ಸರ್ಕಾರದ ಸೂಚನೆಯನ್ನು ಉಲ್ಲಂಘನೆ ಮಾಡಿದರೆ, ನಮಗೆ ಸಹಾಯಧನ ಬರುವುದಿಲ್ಲ. ಮಾನ್ಯ ಸದಸ್ಯರ ಸಲಹೆಯನ್ನು ಕೇಂದ್ರ ಸರ್ಕಾರಕ್ಕೆ ಬರೆಯಬಹುದು.

Details of Amrut Mahal Breed.

216 SRI B. NANJAPPA (Gandsi).—Will the Hon. Minister for Animal Husbandry, Veterinary Services and Horticulture be pleased to state.—

a) The number of Amrut Mahal Breed Cattle in Animal Husbandary Department, at present,

b) the number of groups classified,

c) the number of category-wise animal births & deaths for the last five years,

d) the number of acres of land reserved for "Amrut Mahal" Cattle,

e) whether it is a fact t at the Revenue Department has distributed the lands unauthorisedly ?

SRI VISWANATHA REDDY (Minister for Animal Husbandry, Veternary Services and Horticulture).—

a) 1605.

b) Since the Amrut Mahal Cattle belong to single breed, there is no classification into groups.

c)